**ಓ.ಎಸ್. ನಂ. 66/2020** **ಪಿ.ಡಬ್ಲ್ಯೂ- 1**

**ಸಾಕ್ಷಿಯನ್ನು ದಿನಾಂಕ 24.1.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ಎಂ.ಎಸ್ ವಕೀಲರಿಂದಃ**

ನಾನು ಪ್ರಸ್ತುತ ಬೆಂಗಳೂರಿನಲ್ಲಿ ವಾಸವಾಗಿರುತ್ತೇನೆ. ಕರಾರುಪತ್ರ ಆಗಿದೆ ಎಂದು ಹೇಳುವ ಪೂರ್ವದಲ್ಲಿ ಅಂದರೆ ಜನವರಿ 2017 ರಲ್ಲಿ ಪ್ರತಿವಾದಿಯರು ನನ್ನನ್ನು ಭೇಟಿಯಾಗಿದ್ದರು. ಸದರಿ ದಿನ 1, 2 ನೇ ಪ್ರತಿವಾದಿಯರು, ದೇವಪ್ಪ ಮತ್ತು 1 ನೇ ಪ್ರತಿವಾದಿಯ ಮಕ್ಕಳು ನನ್ನನ್ನು ಭೇಟಿಯಾಗಿದ್ದರು. ಸದರಿ ದಿನ ಮಾತುಕತೆಯು ದೇವಪ್ಪ ನವರ ಮನೆಯಲ್ಲಿ ಆಗಿರುತ್ತದೆ. 2017 ರಲ್ಲಿ ದಾವಆಸ್ತಿಯ ಮೌಲ್ಯ ಪ್ರತಿ ಎಕರೆಗೆ ಎಷ್ಟು ಇತ್ತು ಎಂದು ತಿಳಿದುಕೊಂಡಿರುತ್ತೇನೆ, ಈಗ ಮರೆತು ಹೋಗಿರುತ್ತೇನೆ. ನಾನು ನೋಂದಣಿ ಕಛೇರಿಯಿಂದ ಸದರಿ ಸಮಯಕ್ಕೆ ಸಂಬಂಧಪಟ್ಟ ಮೌಲ್ಯಮಾಪನ ಪಟ್ಟಿಯನ್ನು ಪಡೆದುಕೊಂಡಿರುವುದಿಲ್ಲ. ದಾವಆಸ್ತಿಯು 1 ನೇ ಪ್ರತಿವಾದಿಗೆ ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ಕ್ರಯದ ಕರಾರುಪತ್ರದ ಪೂರ್ವದಲ್ಲಿ ನಾನು ಆಸ್ತಿಯ ಪಹಣಿಯನ್ನು ಮಾತ್ರ ನೋಡಿರುತ್ತೇನೆ. ಬೇರೆ ಯಾವುದೇ ದಾಖಲೆಯನ್ನು ನಾನು ನೋಡಿರುವುದಿಲ್ಲ ಮತ್ತು ಪಡೆದುಕೊಂಡಿರುವುದಿಲ್ಲ ನಿಪಿ2 ಕ್ರಯದ ಕರಾರುಪತ್ರವನ್ನು ಪತ್ರ ಬರಹಗಾರರಾದ ಮಹದೇವು ಎಂಬುವವರು ತಯಾರಿಸಿರುತ್ತಾರೆ. 1 ನೇ ಪ್ರತಿವಾದಿಯು ಅಂಗವಿಕಲರಾಗಿದ್ದು ಅವರಿಗೆ ಸರಿಯಾಗಿ ಕಿವಿ ಕೇಳಿಸುವುದಿಲ್ಲ ಎಂದರೆ ಸಾಕ್ಷಿದಾರರು ಕಿವಿ ಕೇಳಿಸುತ್ತದೆ, ಅದರೆ ಅಂಗವಿಕಲರಾಗಿರುತ್ತಾರೆ ಎನ್ನುವರು. ನಿಪಿ3 ಮುಂದುವರೆದ ಕ್ರಯದ ಕರಾರುಪತ್ರವಾಗುವ ಪೂರ್ವದಲ್ಲಿ ನವೆಂಬರ್/ ಡಿಸೆಂಬರ್ 2018 ರಲ್ಲಿ ಪ್ರತಿವಾದಿಯರು ನನ್ನನ್ನು ಭೇಟಿಯಾಗಿದ್ದರು. ಸದರಿ ಸಮಯದಲ್ಲಿ ದೇವಪ್ಪ, ವಕೀಲರಾದ ಗಂಗರಾಜು, ಪ್ರತಿವಾದಿಯರು ನನ್ನನ್ನು ಭೇಟಿಯಾಗಿದ್ದರು. ಹೆಚ್ಚುವರಿಯಾಗಿ ಹಣ ಕೊಡುವ ಮಾತುಕತೆಯು 1 ನೇ ಪ್ರತಿವಾದಿಯ ಮನೆಯಲ್ಲಿ ಆಗಿರುತ್ತದೆ. ಸದರು ಮಾತುಕತೆಯಾದ ಸಮಯದಲ್ಲಿ ಆಸ್ತಿಯ ಮೌಲ್ಯ ಎಷ್ಟು ಇತ್ತು ಎಂದು ತಿಳಿದುಕೊಂಡಿರುತ್ತೀರಾ ಎಂದರೆ ಸಾಕ್ಷಿದಾರರು ಪ್ರತಿ ಎಕರೆಗೆ 2-3 ಲಕ್ಷ ಇತ್ತು ಎನ್ನುವರು. ಮುಂದುವರೆದ ಕ್ರಯದ ಕರಾರುಪತ್ರವನ್ನು ವಕೀಲರಾದ ಗಂಗರಾಜು ರವರು ತಯಾರಿಸಿರುತ್ತಾರೆ. ನಿಪಿ3 ರ ಒಕ್ಕಣೆಯನ್ನು ನಾನು ಮತ್ತು ಮಧ್ಯವರ್ತಿಯಾದ ದೇವಪ್ಪ ರವರು ಹೇಳಿ ಬರೆಸಿರುತ್ತೇವೆ. ಮುಂದುವರೆದ ಕ್ರಯದ ಕರಾರುಪತ್ರವನ್ನು ಬೆಳಿಗ್ಗೆ 10 ರಿಂದ 12 ಗಂಟೆಯ ನಡುವೆ ಮಾಡಿಕೊಂಡಿರುತ್ತೇವೆ. ನಿಪಿ3 ರ ಸ್ಟಾಂಪ್ ಪೇಪರನ್ನು ವಕೀಲರಾದ ಗಂಗರಾಜು ರವರು ತಂದಿರುತ್ತಾರೆ. ನಿಪಿ2 ಕರಾರುಪತ್ರವಾದ 1 ವರ್ಷದ ಒಳಗೆ ಕ್ರಯಪತ್ರವನ್ನು ಬರೆದುಕೊಡಿ ಎಂದು ಪ್ರತಿವಾದಿಯರಿಗೆ ಲಿಖಿತ ನೋಟಿಸನ್ನು ನೀಡಿರುವುದಿಲ್ಲ. ನಿಪಿ3 ದಾಖಲೆಯಾದ 1 ತಿಂಗಳ ಒಳಗೆ ಕ್ರಯಪತ್ರ ಬರೆದುಕೊಡಿ ಎಂದು

ಪ್ರತಿವಾದಿಯರಿಗೆ ಲಿಖಿತ ನೋಟಿಸನ್ನು ನೀಡಿರುವುದಿಲ್ಲ. ನಿಪಿ2 ಕ್ಕೆ ಸಾಕ್ಷಿದಾರರಾಗಿ ಸಹಿ ಮಾಡಿರುವ ದೇವಪ್ಪ ಮತ್ತು ಜಯಕುಮಾರ್ ಹಾಗೂ ನಿಪಿ3 ಕ್ಕೆ ಸಹಿ ಮಾಡಿರುವ ರಾಜೇಂದರ ನಮ್ಮ ಊರಿನವರು ಎಂದರೆ ಸರಿ. 2019 ರಲ್ಲಿ ಕೋವಿಡ್‌ನಿಂದಾಗಿ ಲಾಕ್‌ಡೌನ್ ಇತ್ತು ಎಂದರೆ ಸರಿ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.